

# ದಾರಿದೀಪವಾದ ಮಾಸ್ತರರ ಮಾತು

ನಾನು ಅದೇ ತಾನೇ ಹರಪನಹಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ 8ನೇ ತರಗತಿಗೆ ಸೇರಿದ್ದೆ. ಪ್ರಾಥಮಿಕ ಶಾಲೆಯಿಂದ ಬಂದವನು... ಒಂದು ಬಗೆಯ ಆತಂಕ! ಓದಿನಲ್ಲಿ ಮುಂದಿದ್ದರೂ ಕ್ರೀಡೆಗಳಲ್ಲಿ ಕೊಂಚ ಹಿಂದೆ. ನಾಚಿಕೆಯ ಪ್ರವೃತ್ತಿ. ದೊಡ್ಡವರೆದುರು ತಲೆಯೆತ್ತಿ ಮಾತನಾಡಲೂ ಹೆದರುತ್ತಿದ್ದೆ.

ಆಗ ಸಮಾಜ ಪಾಠ ಮಾಡುತ್ತಿದ್ದವರು ಎ.ಎಂ. ಚಂದ್ರಶೇಖರಯ್ಯ ಮಾಸ್ತರರು. ಎಲ್ಲರೂ ಅವರನ್ನು 'ಏಎಂಸಿ ಸರ್' ಎಂದೇ ಕರೆಯುತ್ತಿದ್ದರು. ದಸರಾ ಬಂದಿತ್ತು. ಶಾಲೆಯಲ್ಲಿ ಆಟ, ಭಾಷಣ, ಪ್ರಬಂಧ ಮೊದಲಾದ ಸ್ಪರ್ಧೆಗಳನ್ನು ಘೋಷಿಸಲಾಗಿತ್ತು. ಮಾಸ್ತರರು ಭಾಷಣ ಸ್ಪರ್ಧೆಗೆ ನನ್ನ ಹೆಸರು ಆಯ್ಕೆ ಮಾಡಿದ್ದರು. ನನಗೆ ವೇದಿಕೆ ಏರಿ ಅಭ್ಯಾಸವಿಲ್ಲ. ಆ ಎತ್ತರದ ವೇದಿಕೆ, ಅದರಲ್ಲೂ ಅಷ್ಟೊಂದು ಜನರ ಎದುರು ಭಾಷಣ? ಸಮಸ್ಯೆ ಭೀಷಣವೆನಿಸಿತು. ನನ್ನಿಂದ ಸಾಧ್ಯವಿಲ್ಲವೆಂದು ಬೇಡಿಕೊಂಡೆ. ಹಾಗಾದರೆ ಪ್ರಬಂಧ ಬರೆ ಎಂದು ಒತ್ತಾಯಿಸಿ ಹೆಸರು ಬರೆದುಕೊಂಡರು.

ಇದೇನೂ ಅಷ್ಟು ಕಷ್ಟವಾಗಲಿಕ್ಕಿಲ್ಲವೆಂದು ಅವರು ಕೊಟ್ಟಿದ್ದ ವಿಷಯದ ಬಗ್ಗೆ ಮಾಹಿತಿ ಸಂಗ್ರಹಿಸಿಕೊಂಡೆ. ಆ ದಿನ ಪ್ರಬಂಧ ಬರೆದದ್ದೂ ಆಯಿತು. ಅಚ್ಚರಿ! ನನಗೆ ಮೊದಲ ಸ್ಥಾನ! ತಾಲ್ಲೂಕು ಮಟ್ಟದ ಪ್ರಬಂಧ ಸ್ಪರ್ಧೆಗೆ ಆಯ್ಕೆ ಮಾಡಿದರು. ಇಡೀ ತಾಲ್ಲೂಕಿನ ಅಷ್ಟೊಂದು ಶಾಲೆಗಳಿಂದ ಆಯ್ಕೆಯಾಗಿ ಬಂದವರೆದುರು ನಾನು ಸ್ಪರ್ಧಿಸಿ ಗೆಲುವು ಸಾಧಿಸಬಲ್ಲೆನೇ? ಮಾಸ್ತರರು ಪಟ್ಟು ಬಿಡಲಿಲ್ಲ.

'ನಿನ್ನಲ್ಲಿ ಸಾಮರ್ಥ್ಯವಿದೆ. ಸುಮ್ಮನೆ ಬರೆ' ಎಂದು ಬರೆಸಿಯೇಬಿಟ್ಟರು. ಈ ಬಾರಿ ಮತ್ತೆ ಪ್ರಥಮ ಪಟ್ಟ! ವೇದಿಕೆಯೇರಿ ಪ್ರಶಸ್ತಿ ಪತ್ರ ಸ್ವೀಕರಿಸುವಾಗ ಬೀಗಿದ್ದೆ. ನನಗೆ ಆತ್ಮವಿಶ್ವಾಸ ಗರಿಗೆದರಿತ್ತು. ಮುಂದೆ ಕಥೆ, ಕವನ ಬರೆಯಲು ಸಲಹೆ ಕೊಟ್ಟರು. ಅಂತೆಯೇ ನನ್ನ ಮೊದಲ ಕವನ ಮಾಸಿಕದಲ್ಲಿ ಪ್ರಕಟವಾಗಿ ಅದರ ಸಂಭಾವನೆ ರೂ.10 ಬಂದಾಗ ಇಡೀ ಶಾಲೆಗೆ ತೋರಿಸಿ ಮಾಸ್ತರರಿಗೆ ನಮಿಸಿದ್ದೆ. ಅಂದು ಆ ಮಾಸ್ತರರು 'ನಿನ್ನಲ್ಲಿ ಸಾಮರ್ಥ್ಯವಿದೆ' ಎಂದು ಹೇಳಿದ್ದ ಆ ಮಾತು ಇಂದಿಗೂ ನನ್ನನ್ನು ಹಲವು ರೀತಿಯಲ್ಲಿ ಪ್ರೇರೇಪಿಸುತ್ತಲೇ ಬಂದಿದೆ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

# ಹಿತೋಕ್ತಿಗಳ ಪ್ರಭಾವ

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ಸಿ. ವೆಂಕಟಪ್ಪನಾಯಕ್ ಅವರು ನನ್ನ ನೆಚ್ಚಿನ ಶಿಕ್ಷಕರು. ಅವರು ಶಾಲೆಯಲ್ಲಿ ಪಾಠ ಮಾಡುವಾಗ ಮಕ್ಕಳಿಗೆ ಹೇಳುತ್ತಿದ್ದ ಹಿತವಚನಗಳು ಹಾಗೂ ನುಡಿದಂತೆ ನಡೆದ ಅವರ ಆದರ್ಶ ವ್ಯಕ್ತಿತ್ವ ನನ್ನ ಮೇಲೆ ಬೀರಿದ ಪ್ರಭಾವ ಅಪಾರವಾದದ್ದು. ಪಾಠ ಮಾತ್ರವಲ್ಲದೆ ಜೀವನಕ್ಕೂ ಹಲವು ಪಾಠಗಳನ್ನು ಹೇಳಿಕೊಟ್ಟವರು ಅವರು.

'ಯಾವುದೇ ಸಂದರ್ಭದಲ್ಲೂ ಸುಳ್ಳು ಹೇಳಬಾರದು. ಸತ್ಯವನ್ನೇ ನುಡಿಯಬೇಕು, ಯಾರಿಗಾದರೂ ಮಾತು ಕೊಟ್ಟರೆ ಅದನ್ನು ಉಳಿಸಿಕೊಳ್ಳಬೇಕು, ಮಾತಿಗೆ ತಪ್ಪಬಾರದು' ಎಂದು ಯಾವಾಗಲೂ ಹೇಳುತ್ತಿದ್ದರು. 'ನಮ್ಮನ್ನು ಜನ ಜಿಪುಣ ಎಂದರೂ ಪರವಾಗಿಲ್ಲ, ಮೋಸಗಾರ ಎನ್ನುವಂತಾಗಬಾರದು, ಜೀವನದಲ್ಲಿ ಸರಳತೆ ಹಾಗೂ ಮಿತವ್ಯಯದಿಂದ ಬದುಕುವುದನ್ನು ಕಲಿಯಬೇಕು...' ಮುಂತಾದ ಹಿತೋಕ್ತಿಗಳನ್ನು ಪಾಠಗಳೊಂದಿಗೆ ಮಕ್ಕಳ ಮನಸ್ಸಿನಲ್ಲಿ ಬಿತ್ತುತ್ತಲೇ ಇದ್ದರು. ಅವರ ಈ ಮಾತುಗಳು ನನ್ನಂಥ ಅನೇಕ ವಿದ್ಯಾರ್ಥಿಗಳ ಬಾಳಿನ ಬೆಳಕಾಗಿವೆ.

ಶಾಲೆಗೆ ಸಮಯಕ್ಕೆ ಸರಿಯಾಗಿ ಹೋಗಿ ತಮ್ಮ ಪಾಲಿನ ಪಾಠ ಪ್ರವಚನಗಳನ್ನೆಲ್ಲಾ ಯಾವುದೇ ಲೋಪವಿಲ್ಲದೆ ಮಾಡಿ ಮುಗಿಸಿ ಜನಮಾನಸದಲ್ಲಿ 'ಆದರ್ಶ ಶಿಕ್ಷಕ' ಎಂಬ ಬಿರುದಿಗೆ ಪಾತ್ರರಾಗಿದ್ದರು. ಹಣದ ಹಿಂದೆ ಓಡದೇ ಮಾನವೀಯ ಮೌಲ್ಯಗಳಿಗೆ ಹೆಚ್ಚು ಮಹತ್ವ ಕೊಟ್ಟು ಬದುಕಿದಂಥ ವೆಂಕಟಪ್ಪ ಮೇಷ್ಟ್ರು ಬರಿಯ ಮಕ್ಕಳಿಗೆ ಮಾತ್ರ ಅಲ್ಲ, ಸುತ್ತಮುತ್ತಲಿನ ಜನರಿಗೆಲ್ಲಾ ಆದರ್ಶಪ್ರಾಯ ಶಿಕ್ಷಕರಾಗಿದ್ದರು.

—ಚಾವಲ್ಮನೆ ಸುರೇಶ್ ನಾಯಕ್, ಚಿಕ್ಕಮಗಳೂರು

**ಮರೆಯಲಾರದ ಗುರುಗಳ ಮಾತು:** ಶಾಲಾ ಪಠ್ಯ ಮಾತ್ರವಲ್ಲದೆ ಜೀವನ ಪಾಠವನ್ನೂ ಹೇಳಿಕೊಟ್ಟ ಗುರುಗಳು ಎಂದಿಗೂ ಮನದಲ್ಲಿ ನಿಲ್ಲುವರು. ಜೀವನದಲ್ಲಿ ಗೊಂದಲ ಎದುರಾದಾಗ, ಧೈರ್ಯ ಕಳೆದುಕೊಂಡಾಗ ಅವರ ಮಾತುಗಳು ದೀವಿಗೆಯಾಗಿಯೂ ದಾರಿ ತೋರಬಲ್ಲವು. ನಿಮ್ಮ ಜೀವನದಲ್ಲಿ ನಿಮ್ಮ ಮೇಲೆ ಪ್ರಭಾವ ಬೀರಿದ ಶಿಕ್ಷಕರು ಯಾರು? ಎಂದಿಗೂ ಮನದಲ್ಲಿ ಅಚ್ಚಳಿಯದೆ ಉಳಿದ ಅವರ ಮುತ್ತಿನಂಥ ಮಾತು ಯಾವುದು? 'ಸುಧಾ'ದೊಂದಿಗೆ ನಿಮ್ಮ ಅನುಭವವನ್ನು ಹಂಚಿಕೊಳ್ಳಬಹುದು. 150 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿ ನಿಮ್ಮ ಬರಹವಿರಲಿ. ಕೊನೆಯ ದಿನಾಂಕ; ಅಕ್ಟೋಬರ್ 02. ಇಮೇಲ್– editorsu@sudha.co.in